# ತುಮಕೂರು ವಿಶ್ವವಿದ್ಯಾನಿಲಯ
## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,
ಬಿ.ಹೆಚ್. ರಸ್ತೆ, ತುಮಕೂರು. 572103 ದೂ.ಸಂ: 0816-2260220


ಸಂಖ್ಯೆ:ವಿವಿಕಾತು:2024-25/665. ದಿನಾಂಕ:17.02.2025

## ದರಪಟ್ಟಿ ಆಹ್ವಾನ

ವಿಷಯ:ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವವಿಜ್ಞಾನ ಕಾಲೇಜಿನ ಕ್ಯಾಂಟೀನ್‌ನ್ನು ಬಾಡಿಗೆ ಆಧಾರದಲ್ಲಿ ನಡೆಸಲು ಅಲ್ಪಾವಧಿ ದರಪಟ್ಟಿ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ:ಕ್ಯಾಂಟೀನ್ ಮೇಲ್ವಿಚಾರಣೆ ಸಮಿತಿ ಸಭಾ ನಡಾವಳಿ ದಿನಾಂಕ:06.02.2025

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಆವರಣದಲ್ಲಿ ಬಾಡಿಗೆ ಆಧಾರದಲ್ಲಿ ಕ್ಯಾಂಟೀನ್‌ನ್ನು ನಡೆಸಲು ಅಲ್ಪಾವಧಿ ದರಪಟ್ಟಿ ಆಹ್ವಾನಿಸಲಾಗಿದೆ. ಬಾಡಿಗೆ ಆಧಾರದಲ್ಲಿ ಕ್ಯಾಂಟೀನ್ ನಡೆಸುವವರು ಕ್ಯಾಂಟೀನ್‌ನಲ್ಲಿ ತಯಾರಾಗುವ ಆಹಾರ ಪದಾರ್ಥಗಳ ಮತ್ತು ಪಾನೀಯಗಳ ಪಟ್ಟಿಯಲ್ಲಿ Annexure-01 ರಲ್ಲಿ ದರವನ್ನು ನಮೂದಿಸಿದ್ದು, ವಿಶ್ವವಿದ್ಯಾನಿಲಯದ ಕಡೆಯಿಂದ ಷರತ್ತು ಮತ್ತು ನಿಯಮಗಳನ್ನು (Terms & Conditions) Annexure-02 ನೀಡಲಾಗಿದೆ. ಈ ದರ(Price list) ಮತ್ತು ಷರತ್ತು ನಿಯಮಗಳನ್ನು ಒಪ್ಪಿ ಕ್ಯಾಂಟೀನ್ ನಡೆಸಲು ಇಚ್ಛೆಯುಳ್ಳವರು ದಿನಾಂಕ:10.03.2025 ರ ಸಂಜೆ 5.00 ಗಂಟೆಯೊಳಗೆ ದರಪಟ್ಟಿಗಳನ್ನು ಪ್ರಾಂಶುಪಾಲರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ಬಿ.ಹೆಚ್ ರಸ್ತೆ, ತುಮಕೂರು-572103 ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ತಲುಪಿಸಬಹುದು. ದರಪಟ್ಟಿಗಳನ್ನು ದಿನಾಂಕ:12.03.2025 ರಂದು ಬೆಳಗ್ಗೆ 11.30 ಗಂಟೆಗೆ ತೆರೆಯಲಾಗುವುದು. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಮಾಹಿತಿಗೆ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು ಮೊ.-9901261940

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572103

ಪ್ರತಿಗಳು:-

1.ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2.ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3.ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4.ಸೂಚನಾ ಫಲಕ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
5.ಶ್ರೀ. ಹರೀಶ್ ಕುಮಾರ್ ಕೆ, ಸಂಯೋಜಕರು, ವೆಬ್ ಸೈಟ್ ಸಮಿತಿ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು. – ವಿಜ್ಞಾನ ಕಾಲೇಜಿನ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.
6.ಕಚೇರಿ ಪ್ರತಿ.

## Annexure-02

### ಕ್ಯಾಂಟಿನ್ ನಡೆಸಲಿಚ್ಚಿಸುವವರಿಗೆ ಷರತ್ತು / ನಿಯಮಗಳು

- ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿ.ವಿ.ಯ ಘಟಕ ಕಾಲೇಜಾದ ವಿಜ್ಞಾನ ಕಾಲೇಜಿನ ಕ್ಯಾಂಟೀನ್‌ನ್ನು ಬಾಡಿಗೆ ಆಧಾರದ ಮೇಲೆ ನಡೆಸಲು ಕ್ರಮವಾಗಿ 174.9 ಚ.ಮೀ.ಗಳಷ್ಟು ಸ್ಥಳಾವಕಾಶವಿರುತ್ತದೆ.
- ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಕ್ಯಾಂಟಿನ್ ಸಮಿತಿಯು ನೀಡುವ ಶಿಫಾರಸ್ಸನ್ನು ಚಾಚೂ ತಪ್ಪದೆ ಅನುಸರಿಸಬೇಕು. ಮೇಲ್ವಿಚಾರಣಾ ಸಮಿತಿಯು ಕ್ಯಾಂಟಿನ್‌ನಲ್ಲಿ ತಯಾರಾಗುವ ಆಹಾರ ಪಾನೀಯಗಳ ಗುಣಮಟ್ಟ ಹಾಗೂ ಪ್ರಮಾಣದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ ಶಿಫಾರಸ್ಸು ಮಾಡಿದರೆ ಕ್ಯಾಂಟಿನ್ ಟೆಂಡರನ್ನು ರದ್ದುಗೊಳಿಸಲಾಗುತ್ತದೆ.
- ಕ್ಯಾಂಟಿನ್ ನಡೆಸಲು ಅನುಭವ, ಸೇವಾ ದಕ್ಷತೆ, ಉತ್ತಮ ಗುಣಮಟ್ಟದ ಆಹಾರ ತಯಾರಿಕೆ, ಶುಚಿತ್ವ ಇವು ಪ್ರಮುಖ ಮಾನದಂಡವಾಗಿರುತ್ತದೆ.ಇದನ್ನು ಕಡ್ಡಾಯವಾಗಿ ಯಶಸ್ವಿ ಬಿಡ್ಡುದಾರನು ಪಾಲಿಸಬೇಕಾಗಿರುತ್ತದೆ.
- ದರಪಟ್ಟಿ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಕಾಲೇಜಿನ ತೀರ್ಮಾನವೇ ಅಂತಿಮವಾಗಿರುತ್ತದೆ.
- ಕ್ಯಾಂಟಿನ್ ಮೇಲ್ವಿಚಾರಣಾ ಸಮಿತಿಯು ನೀಡುವ ನಿರ್ದೇಶನ ಮತ್ತು ಸೂಚನೆಗಳಿಗೆ ಕ್ಯಾಂಟಿನನ್ನು ನಡೆಸುವವರು ಬದ್ಧರಾಗಿರಬೇಕಾಗಿರುತ್ತದೆ.
- ವಿತರಿಸುವ ಆಹಾರ ಪದಾರ್ಥಗಳ ಪ್ರಮಾಣ, ಬೆಲೆ, ಇತ್ಯಾದಿಗಳಿಗೆ ಕ್ಯಾಂಟಿನ್ ಮೇಲ್ವಿಚಾರಣಾ ಸಮಿತಿಯೊಂದಿಗೆ ಚರ್ಚಿಸಿ ನಿಗದಿಪಡಿಸುವ ದರಗಳಿಗೆ ವಿತರಿಸಲು ಸಿದ್ಧರಿರಬೇಕು.
- ಆಹಾರ ಪದಾರ್ಥಗಳಲ್ಲಿ ಪೌಷ್ಟಿಕ ಆಹಾರಾಂಶಗಳನ್ನು ಮತ್ತು ಗುಣಮಟ್ಟಗಳನ್ನು ಸಂಬಂಧಪಟ್ಟ ಇಲಾಖೆ ವಿಧಿಸು-ವ ವಿಧಿ-ವಿಧಾನಗಳಂತೆ ಕಡ್ಡಾಯವಾಗಿ ಕಾಪಾಡಿಕೊಳ್ಳತಕ್ಕದ್ದು.
- ಪರವಾನಿಗೆದಾರರು ಮಾಸಿಕ ಕ್ಯಾಂಟಿನ್ ಬಾಡಿಗೆಯ ಜೊತೆಗೆ ಪ್ರತ್ಯೇಕ ವಿದ್ಯುತ್ ವೆಚ್ಚದ ಬಿಲ್ಲನ್ನು ಪಾವತಿಸುವುದು ಹಾಗೂ ನೀರಿನ ವೆಚ್ಚ ರೂ 1,000/-ಗಳನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ,ತುಮಕೂರು ಇವರ ಖಾತೆಗೆ ಜಮಾಮಾಡುವುದು. ಯಾವುದೇ ತಿಂಗಳಿನಲ್ಲಿ ಕರಾರುವಕ್ಕಾಗಿ ಬಾಡಿಗೆ ಪಾವತಿಸಲು ವಿಫಲರಾದರೆ, ಕ್ಯಾಂಟಿನ್ ಮೇಲ್ವಿಚಾರಣೆ ಸಮಿತಿಯಿಂದ ವರದಿ ಪಡೆದು ಕ್ಯಾಂಟೀನ್ ನಡೆಸಲು ನೀಡಲಾದ ಅನುಮತಿಯನ್ನು ರದ್ದುಗೊಳಿಸಲಾಗುತ್ತದೆ ಮತ್ತು ಇದು ಅಂತಿಮ ತೀರ್ಮಾನವಾಗಿರುತ್ತದೆ.ಈ ಬಗ್ಗೆ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
- ಕ್ಯಾಂಟಿನ್ ನಡೆಸುವ ಸ್ಥಳದಲ್ಲಿ ಯಾವುದೇ ತರಹದ ಸ್ಫೋಟಕ ವಸ್ತುಗಳನ್ನಾಗಲಿ, ಬೆಂಕಿ ಅನಾಹುತಕ್ಕೆ ಕಾರಣವಾಗುವಂತಹ ವಸ್ತುಗಳನ್ನಾಗಲಿ ಇಡಬಾರದು.
- ಕ್ಯಾಂಟಿನ್ ನಡೆಸುವ ಸ್ಥಳದಲ್ಲಿ ಕಡ್ಡಾಯವಾಗಿ ಬೆಂಕಿ ಶಮನ ಮಾಡುವ ವ್ಯವಸ್ಥೆಯನ್ನು ಹೊಂದಿರತಕ್ಕದ್ದು.
- ಕ್ಯಾಂಟಿನ್ ನಡೆಸುವ ಸಮಯದಲ್ಲಿ ಉಂಟಾಗುವ ಆಕಸ್ಮಿಕ ಅಥವಾ ಅಪಘಾತಗಳಿಗೆ ಪರವಾನಗಿದಾರರೇ ಸಂಪೂರ್ಣ ಹೊಣೆಗಾರರು.
- ಕ್ಯಾಂಟಿನ್ ಹೊರತಾಗಿ ಯಾವುದೇ ಅಂಗಡಿ ವಸ್ತುಗಳನ್ನು ಮಾರಾಟಕ್ಕೆ ಇಡಬಾರದು.ಬೀಡಿ, ಸಿಗರೇಟು, ತಂಬಾಕು, ಇತ್ಯಾದಿಗಳ ಮಾರಾಟವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.
- ಕ್ಯಾಂಟಿನ್ ನಡೆಸಲು ಬೇಕಾದ ಹಾಲಿ ಕಟ್ಟಡದಲ್ಲಿರುವ ಸಾಮಗ್ರಿಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಸಾಮಗ್ರಿಗಳನ್ನು ಕ್ಯಾಂಟೀನ್ ನಡೆಸುವವರೇ ವ್ಯವಸ್ಥೆ ಮಾಡಿಕೊಳ್ಳಬೇಕು.
- ಕ್ಯಾಂಟಿನ್‌ನ ಒಳಾಂಗಣ ಹಾಗೂ ಹೊರಾಂಗಣ ಪ್ರದೇಶಗಳಲ್ಲಿ ಸ್ವಚ್ಚತೆ, ಶಾಂತಿ, ಇವುಗಳನ್ನು ಕಾಪಾಡತಕ್ಕದ್ದು.ತ್ಯಾಜ್ಯ ವಸ್ತುಗಳನ್ನು ವಿ.ವಿ.ನಿಲಯದ ಆವರಣದಿಂದ ಮಹಾನಗರ ಪಾಲಿಕೆಯವರು ನಿಗದಿಪಡಿಸಿರುವ ಜಾಗಕ್ಕೆ ಸಾಗಿಸುವ ಜವಾಬ್ದಾರಿಯು ಕ್ಯಾಂಟೀನ್ ನಡೆಸುವವರದ್ದಾಗಿರುತ್ತದೆ..
- ಕ್ಯಾಂಟಿನನ್ನು ಕಾಲೇಜಿನಿಂದ ಪಡೆದವರೇ ನಡೆಸಬೇಕೇ ಹೊರತು, ಬೇರೆ ಯಾರಿಗೂ ಬಾಡಿಗೆಗೆ ಅಥವಾ ಗುತ್ತಿಗೆಗೆ ನೀಡಕೂಡದು.ಈ ರೀತಿ ಆದರೆ, ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.
- ಕಾಲೇಜಿನಿಂದ ಪರವಾನಗಿ ಪಡೆದವರು ಕ್ಯಾಂಟಿನ್‌ನಲ್ಲಿ ಸಸ್ಯಾಹಾರಿ ಆಹಾರ ಪದಾರ್ಥಗಳನ್ನು ಮಾತ್ರ ಸರಬರಾಜು ಮಾಡಬೇಕೇ ಹೊರತು, ಮಾಂಸಾಹಾರಿ ಪದಾರ್ಥಗಳನ್ನು ಮಾರಾಟ ಮಾಡಬಾರದು ಹಾಗೂ ನಿರ್ಬಂಧಿತ ಸೇವನೆಗಳನ್ನು ಮಾರಾಟ/ಸರಬರಾಜು ಮಾಡಬಾರದು.
- ಕ್ಯಾಂಟಿನ್ ನಡೆಸುವವರಿಗೆ ಅವರ ವಸ್ತುಗಳಿಗೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಯಾವುದೇ ರೀತಿಯ ಭದ್ರತೆಗೆ ಖಾತರಿ ನೀಡುವುದಿಲ್ಲ.ಇದಕ್ಕೆ ಕ್ಯಾಂಟಿನ್‌ದಾರರೇ ಸ್ವಂತ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ.
- ಕ್ಯಾಂಟಿನ್ ನೌಕರರು ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸಬೇಕು.

- ಕ್ಯಾಂಟಿನನ್ನು ಒಂದು ವರ್ಷಗಳ ಕಾಲ ನಡೆಸಲು ದರಪಟ್ಟಿ ಕರೆಯಲಾಗಿದ್ದು, ಕ್ಯಾಂಟೀನ್‌ನ್ನು ಬಾಡಿಗೆಗೆ ಪಡೆದವರು ಉತ್ತಮವಾಗಿ ಕ್ಯಾಂಟೀನ್ ನಡೆಸಿಕೊಂಡು ಹೋದಲ್ಲಿ ಸದರಿಯವರಿಗೆ ಮತ್ತೊಂದು .ವರ್ಷದ ಅವಧಿಗೆ ಗುತ್ತಿಗೆಯನ್ನು ವಿಸ್ತರಿಸುವುದು ಸೇರಿದಂತೆ ಗರಿಷ್ಟ 3 ವರ್ಷಗಳ ಕಾಲ ಗುತ್ತಿಗೆಯನ್ನು ನೀಡುವ ಹಾಗೂ ಗುತ್ತಿಗೆಯನ್ನು ವಿಸ್ತರಿಸಿದ ಅವಧಿಗೆ ಹೆಚ್ಚಿನ ಬಾಡಿಗೆ ನಿಗದಿಪಡಿಸುವ ಹಕ್ಕನ್ನು ಸಹ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಹೊಂದಿರುತ್ತದೆ.
- ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಆಯೋಜಿಸುವ ಸಭೆ-ಸಮಾರಂಭಗಳಿಗೆ ಕಾಲೇಜಿನ ಕೋರಿಕೆ ಮೇರೆಗೆ ಊಟ, ತಿಂಡಿ ಮತ್ತು ಕಾಫಿ, ಟೀ ಇತ್ಯಾದಿಗಳನ್ನು ಒದಗಿಸುವುದು.
- ಮಾಸಿಕ ಬಾಡಿಗೆಯನ್ನು ಸಮನಾಗಿ ನಮೂದಿಸುವ ಗರಿಷ್ಟ ಯಶಸ್ವಿ ಕ್ಯಾಂಟೀನ್ ನಡೆಸುವವರ ಪೈಕಿ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ತೆಗೆದುಕೊಳ್ಳುವ ತೀರ್ಮಾನಕ್ಕೆ ಕ್ಯಾಂಟೀನ್ ನಡೆಸುವವರು ಬದ್ಧರಾಗಿರಬೇಕಾಗಿರುತ್ತದೆ.
- ದರಪಟ್ಟಿಯಲ್ಲಿ ಯಶಸ್ವಿಯಾಗಿ ಕ್ಯಾಂಟಿನ್ ನಡೆಸಲು ಆದೇಶ ಪಡೆದವರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಸದರಿ ಕರಾರಿನಂತೆ ಅವಧಿಯ ಮೂರ್ಣಗೊಂಡ ನಂತರ ಸ್ಥಳವನ್ನು ಕಡ್ಡಾಯವಾಗಿ ತೆರವುಗೊಳಿಸುವುದು. ತಪ್ಪಿದ್ದಲ್ಲಿ, ಸ್ಥಳವನ್ನು ಅನಧಿಕೃತವಾಗಿ ಅತಿಕ್ರಮಿಸಲಾಗಿದೆ ಎಂದು ಪರಿಗಣಿಸಿ ಕರ್ನಾಟಕ ಸಾರ್ವಜನಿಕ ಸ್ಥಳಗಳ ಅನಧಿಕೃತ ವಾಸಿಗಳನ್ನು ತೆರವುಗೊಳಿಸುವ ಕಾಯಿದೆ 1974 ರ **In accordance with the provisions of Karnataka Public Premises (Eviction of unauthorized occupants) Act 1974** ಪ್ರಕಾರ ತೆರವುಗೊಳಿಸಲಾಗುವ ಹಕ್ಕು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿಗೆ ದತ್ತವಾಗಿರುತ್ತದೆ.
- ಕ್ಯಾಂಟಿನ್ ನಡೆಸುವ ಪರವಾನಗಿದಾರರು ತುಮಕೂರು ಮಹಾನಗರ ಪಾಲಿಕೆಯಿಂದ ಅಧಿಕೃತ ಉದ್ದಿಮೆ ಪರವಾನಗಿ ರಹದಾರಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು ಹಾಗೂ ದೃಢೀಕ್ರತ ಪ್ರತಿಯನ್ನು ಟೆಂಡರ್ ಜೊತೆಯಲ್ಲಿ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ, ದರಪಟ್ಟಿಯನ್ನು ತಿರಸ್ಕರಿಸಲಾಗುವುದು.
- ಕ್ಯಾಂಟೀನ್ ನಡೆಸುವ ಪರವಾನಗಿದಾರರು ಆಹಾರ ಪದಾರ್ಥಗಳನ್ನು ಮಾರುಕಟ್ಟೆಯಲ್ಲಿ ಲಭ್ಯವಿರುವ ದರಕ್ಕಿಂತ ಕಡಿಮೆ ದರದಲ್ಲಿ, ರಿಯಾಯತಿ ದರದಲ್ಲಿ ಸರಬರಾಜು ಮಾಡತಕ್ಕದ್ದು.
- ಕ್ಯಾಂಟಿನ್ ನಡೆಸಲು ಇಚ್ಚಿಸುವವರು ಕ್ಯಾಂಟಿನ್ ನಡೆಸಿರುವುದರ ಬಗ್ಗೆ ಸೇವಾ ಅನುಭವದ ದೃಢೀಕೃತ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು, ಇತ್ತೀಚಿನ ಆದಾಯ ಪ್ರಮಾಣಪತ್ರ, ಹೋಟೆಲ್ ಉದ್ದಿಮೆ ನಡೆಸುವ ಸಂಬಂಧದ ರಹದಾರಿ ಪತ್ರ, GST No. ಮತ್ತು ಪ್ಯಾನ್ ಕಾರ್ಡ್ ಇವುಗಳನ್ನು ಕಡ್ಡಾಯವಾಗಿ ಹೊಂದಿರಬೇಕು ಹಾಗೂ ದೃಢೀಕ್ರತ ಪ್ರತಿಗಳನ್ನು ತಮ್ಮ ದರಪಟ್ಟಿ ಜೊತೆಯಲ್ಲಿ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.
- ಬಾಡಿಗೆ ಮತ್ತು ವಿದ್ಯುಚ್ಛಕ್ತಿ ವೆಚ್ಚ ಪಾವತಿಸಿದ ಬಿಲ್ಲು ಹಾಗೂ ನೀರಿನ ವೆಚ್ಚಗಳನ್ನು ಪಾವತಿಸಿದ ಬಿಲ್ಲುಗಳ ಜೆರಾಕ್ಸ್ ಪ್ರತಿಯನ್ನು ಪ್ರತಿ ತಿಂಗಳು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಇವರಿಗೆ ಕಡ್ಡಾಯವಾಗಿ ಸಲ್ಲಿಸುವುದು.
- ಕ್ಯಾಂಟೀನ್ ನಡೆಸಲು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಿಂದ ಅನುಮತಿ ದೊರೆತ ನಂತರ ಕ್ಯಾಂಟೀನ್ ಪ್ರಾರಂಭಕ್ಕಿಂತ ಮುಂಚಿತವಾಗಿ ಮುಂಗಡವಾಗಿ ರೂ.50,000/-ಗಳ ಡಿ.ಡಿ.ಯನ್ನು The Finance officer, Tumkur University, Tumkur ಇವರ ಹೆಸರಿಗೆ ಸಂದಾಯವಾಗುವಂತೆ ಪಡೆದು ಸಲ್ಲಿಸಬೇಕು .ಬಾಡಿಗೆ ವಿದ್ಯುಚ್ಛಕ್ತಿ ವೆಚ್ಚ ಹಾಗೂ ನೀರಿನ ವೆಚ್ಚಗಳನ್ನು ಪಾವತಿಸಲು ವಿಫಲರಾದರೆ ಮುಂಗಡವಾಗಿ ಪಡೆದ ಹಣದಲ್ಲಿ ಜಮಾಮಾಡಿಕೊಳ್ಳಲಾಗುವುದು ಹಾಗೂ ಕ್ಯಾಂಟೀನ್ ನಡೆಸಲು ನೀಡಲಾದ ಅನುಮತಿಯನ್ನು ರದ್ದುಗೊಳಿಸಲಾಗುವುದು
- ಕಾಲೇಜಿನಿಂದ ನಿಗಧಿಪಡಿಸಿರುವ ದರಪಟ್ಟಿಯನ್ನು ಕ್ಯಾಂಟೀನ್‌ನಲ್ಲಿ ಕಾಣುವ ಹಾಗೆ ಕಡ್ಡಾಯವಾಗಿ ಪ್ರದರ್ಶಿಸಬೇಕು.

**ಪ್ರಾಂಶುಪಾಲರು**
**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು**
**ತುಮಕೂರು**

ಈ ಮೇಲ್ಕಂಡ ಷರತ್ತುಗಳಿಗನುಗುಣವಾಗಿ ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿಜ್ಞಾನ ಕಾಲೇಜಿನ ಕ್ಯಾಂಟೀನ್‌ನ್ನು ನಡೆಸುವ ಸಂಬಂಧ ದರಪಟ್ಟಿ ನಿಯಮಾವಳಿಗಳ ಪ್ರಕಾರ ವಿಜ್ಞಾನ ಕಾಲೇಜಿನ ಕ್ಯಾಂಟೀನ್ ಮಾಸಿಕ ಬಾಡಿಗೆ ರೂ.__________ (ರೂಪಾಯಿ ______________________)ಗಳನ್ನು ಮತ್ತು ನೀರಿನ ವೆಚ್ಚ ಹಾಗೂ ವಿದ್ಯುಚ್ಛಕ್ತಿ ವೆಚ್ಚದ ಬಿಲ್ಲುಗಳನ್ನು ಪಾವತಿಸಲು ಒಪ್ಪಿರುತ್ತೇನೆ.

**ಬಾಡಿಗೆದಾರರ ಸಹಿ**

**ಬಾಡಿಗೆದಾರರ ವಿಳಾಸ:**

**Annexure–01**

**ದರ ಪಟ್ಟಿ (Price list )**

| ಕ್ರಸಂ | ತಿಂಡಿ ಪದಾರ್ಥಗಳು | ಪರಿಮಾಣ (ತೂಕ/ಪ್ರಮಾಣ) | ಈ ಕಾಲಂನಲ್ಲಿ ಉಪಹಾರ ಗೃಹದಲ್ಲಿನ ಮಾರಾಟ ದರಗಳನ್ನು ನಮೂದಿಸಲಾಗಿದೆ. ದರಪಟ್ಟಿ ಅಂಕಿಯಲ್ಲಿ ರೂ. ಪೈ |
|---|---|---|---|
| 1 | ಕಾಫಿ | 100 ಮಿ.ಲಿ | 10 ರೂ |
| 2 | ಟೀ | 100 ಮಿ.ಲಿ | 10 ರೂ |
| 3 | ಬಾದಾಮಿ ಹಾಲು | 100 ಮಿ.ಲಿ | 10 ರೂ |
| 4 | ರವೆ/ಅಕ್ಕಿ ಇಡ್ಲಿ | 01 ಪ್ಲೇಟ್ (2pcs} | 20 ರೂ |
| 5 | ತಟ್ಟೆ ಇಡ್ಲಿ | 01 ಪ್ಲೇಟ್ | 20 ರೂ |
| 6 | ಬಿಸಿಬೇಳೆ ಬಾತ್ | 01 ಪ್ಲೇಟ್ | 35 ರೂ |
| 7 | ಚಿತ್ರಾನ್ನ | 01 ಪ್ಲೇಟ್ | 25 ರೂ |
| 8 | ಮೊಸರನ್ನ | 01 ಪ್ಲೇಟ್ | 30 ರೂ |
| 9 | ಪಲಾವ್ | 01 ಪ್ಲೇಟ್ | 35 ರೂ |
| 10 | ವಾಂಗೀಬಾತ್ | 01 ಪ್ಲೇಟ್ | 35 ರೂ |
| 11 | ಚಪಾತಿ | 01 ಪ್ಲೇಟ್(2pcs) | 30 ರೂ |
| 12 | ಪುಳಿಯೊಗರೆ | 01 ಪ್ಲೇಟ್ | 35 ರೂ |
| 13 | ಸೆಟ್ ದೋಸೆ | 01 ಪ್ಲೇಟ್(2pcs) | 40 ರೂ |
| 14 | ಮೆಂತ್ಯಾಬಾತ್ | 01 ಪ್ಲೇಟ್ | 35 ರೂ |
| 15 | ಫ್ರೈಡ್ ರೈಸ್ | 01 ಪ್ಲೇಟ್ | 50 ರೂ |
| 16 | ಪೂರಿ | 01 ಪ್ಲೇಟ್(03pcs) | 40 ರೂ |
| 17 | ಅನ್ನ ಸಾಂಬರ್ ,ಹಪ್ಪಳ | 01 ಪ್ಲೇಟ್ | 35 ರೂ |
| 18 | ಬಜ್ಜಿ/ಬೊಂಡ/ವಡೆ | 01 ಪ್ಲೇಟ್(03pcs) | 15 ರೂ |
| 19 | ಸಮೋಸ | 01 ಕ್ಕೆ | 15 ರೂ |
| 20 | ಅನ್ನ ಸಾಂಬರ್ ಮುದ್ದೆ, , ಚಪಾತಿ / ಪಲ್ಯ/ಸಾಗು,ಮೊಸರು/ಮಜ್ಜಿಗೆ,ಹಪ್ಪಳ | 01 ಕ್ಕೆ ಊಟ | 60 ರೂ |
| 21 | ಸಿಹಿ ತಿನಿಸು | 01 ಕ್ಕೆ | 15 ರೂ |

ಪ್ರಾಂಶುಪಾಲರು
ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572103